# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.

**C.C. - 1525-24** **ಪಿಡಬ್ಲ್ಯೂ: 6**

**ಸಿಡಬ್ಲ್ಯೂ: 3**

ಸಾಕ್ಷಿದಾರರ ಹೆಸರು : ಸಂಜಯ ಹಂದಿಗೋಳ

ತಂದೆ ಹೆಸರು : ಸುರೇಶ

ವಯಸ್ಸು : 26 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕ: 16.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಅಂದಾಜು 2 ವರ್ಷಗಳ ಹಿಂದೆ ಅಪಘಾತ ದ ಸ್ಥಳದಲ್ಲಿ ಪೋಲಿಸರು ಅಪಘಾತ ವಾದ ಮರುದಿನ 12 ಗಂಟೆಗೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದಾರೆ. ಆ ಕಾಲಕ್ಕೆ ನಾನೊಬ್ಬನೇ ಇದ್ದೆನು. ಘಟನಾ ಸ್ಥಳವನ್ನು ಚಾಸಾ-5 ರವರು ತೋರಿಸಿದ್ದಾರೆ. ಆ ಕಾಲಕ್ಕೆ ಒಂದು ಪೊಟೋ ತೆಗೆದಿದ್ದಾರೆ. ಪಂಚನಾಮೆಯನ್ನು ನಿಪಿ.7 ಎಂದು, ಸಾಕ್ಷಿ ಸಹಿ ನಿಪಿ.7-ಎ ಎಂದು ಗುರುತಿಸಲಾಯಿತು. ಸಾಕ್ಷಿ ಪೊಟೋ ನೋಡಿ ಗುರುತಿಸಿದ್ದು ಪೊಟೋವನ್ನು ನಿಪಿ.8 ಎಂದು ಗುರುತಿಸಲಾಯಿತು. ವಾಹನ ತಡೆ ಹಿಡಿದ ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು, ಸಾಕ್ಷಿ ಸಹಿ ನಿಪಿ.9-ಎ ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನ ಜಪ್ತಪಡಿಸಿಕೊಂಡಿರುವುದಿಲ್ಲ. ವಾಹನ ಜಪ್ತಪಡಿಸಿಕೊಂಡ ದಿನಾಂಕ ಹಾಗೂ ಸಮಯ ಗೊತ್ತಿಲ್ಲ. ನಿಪಿ.1 ಪೊಟೋ ವಾಯಾಗ ತೆಗೆದಿದ್ದಾರೆಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

**ನಿಪಿ.7 ಪಂಚನಾಮೆಯನ್ನು** ದಿಃ 6.4.2025 ರಂದು ಮಾಡಿದ್ದಾರೆಂದರೆ ನೆನಪಿಲ್ಲ.  ಬೆಳಿಗ್ಗೆ 10-11 ಗಂಟೆವರೆಗೆ ಮಾಡಿದ್ದಾರೆ ಅಂದರೆ ಸರಿ.  ನಿಪಿ.7 ಕ್ಕೆ ಚಾಸಾ-2 ರವರು ಸಹಿ ಮಾಡಿದ್ದು ಗೊತ್ತಿಲ್ಲ.  ದಿಃ 6.4.2024 ರಂದು ಸಮಯಃ 10.30 ಗಂಟೆಯಿಂದ 11.15 ಗಂಟೆವರೆಗೆ ನಿಪಿ.9 ಪಂಚನಾಮೆ ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ಮಾಡಿ ಕೆಎ-63 ಇ /8991 ಹಾಗೂ ಕೆಎ- 05 ಎಂ ಎಕ್ಸ - /2268 ವಾಹನಗಳನ್ನು ಜಪ್ತಪಡಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ.   ನಿಪಿ.1 ನ್ನು ನಿಪಿ.9 ರ ಕಾಲಕ್ಕೆ ತೆಗೆದಿದ್ದಾರೆ ಅಂದರೆ ಸರಿಯಲ್ಲ.   ನಿಪಿ.7 ರಿಂದ 9 ಹಾಗೂ 1 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**C.C. - 1525-24** **ಪಿಡಬ್ಲ್ಯೂಃ 7**

**ಸಿಡಬ್ಲ್ಯೂಃ 6**

ಸಾಕ್ಷಿದಾರರ ಹೆಸರು ಃ ರಫಿಕ ಅನಕರಿ

ತಂದೆ ಹೆಸರು ಃ ಬಾಬು

ವಯಸ್ಸು ಃ 21 ವರ್ಷ

ಉದ್ಯೋಗ ಃ ಆಟೋ ಚಾಲಕ

ವಾಸಸ್ಥಳ ಃ ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 16.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಂದಾಜು 2024 ರಲ್ಲಿ ಕುಸುಗಲ್ ರೋಡಿನ ಕೇಶ್ವಾಪೂರ ದಲ್ಲಿ ಬೈಕ್ ಸವಾರ ಬಲಗಡೆಯಿಂದ ಬರುತ್ತಿದ್ದನು. ಓವರಟೇಕ ಮಾಡಿ ಬಂದು ತಾನೇ ಸ್ಕಿಡ್ಡಾಗಿ ಬಿದ್ದನು. ಬೈಕ್ ಸವಾರನ ಹೆಸರು ಗೊತ್ತಿಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 4.4.2024 ರಂದು ಸಂಜೆಃ 5.45 ಗಂಟೆಗೆ ಅಪಘಾತ ವಾಗಿದೆ ಅಂದರೆ ಸರಿ. ಅಪಘಾತ ಪಡಿಸಿದ ವ್ಯಕ್ತಿ ರಿಜವಾನ ತಂದೆಃ ಮೆಹಬೂಬಸಾಬ ಬಾಬಕ್ಕನವರ ಅಂದರೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನೋಡಿ ಗುರುತಿಸಿದ್ದಾರೆ. ವಾಹನ ನಂಃ ಕೆಎ-63 ಇ /8991 ಅಂದರೆ ಗೊತ್ತಿಲ್ಲ. ಆರೋಪಿತನು ಆ ದಿನ ಬೈಕನ್ನು ಅತಿ ವೇಗ ಹಾಗೂ ನಿರ್ಲಕ್ಷ್ಯತನಂದ ಚಾಲನೆ ಮಾಡಿದ್ದನು ಅಂದರೆ ಸರಿಯಲ್ಲ. ಕಾರ್ ನಂಃ ಕೆಎ-05 ಎಂಎಕ್ಸ - /2268 ಅಂದರೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.